**ಕರ್ನಾಟಕ ವಿಧಾನ ಪರಿಷತ್ತು**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ತಿಪ್ಪಣ್ಣ ಕಮಕನೂರ**

**(ವಿಧಾನ ಸಭಾ ಕ್ಷೇತ್ರ)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 54**

**ಉತ್ತರಿಸಬೇಕಾದ ದಿನಾಂಕ : 04.03.2025**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘ ಇದರ ಉತ್ಪನ್ನಗಳು ಯಾವುವು: ಇದರ ಧ್ಯೇಯೋದ್ದೇಪಶಗಳೇನು (ವಿವರ ನೀಡುವುದು) | ಕರ್ನಾಟಕ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘ ಇದರ ಉತ್ಪನ್ನಗಳು, ಸಫಲ್ ಕಡಲೇ ಕಾಯಿ ಎಣ್ಣೆ, ಸನ್ ಗೋಲ್ಡ್ ರಿಫೈನ್ಡ್ ಸೂರ್ಯಕಾಂತಿ ಎಣ್ಣೆ, ಸಫಲ್ ಕೊಬ್ಬರಿ ಎಣ್ಣೆ, ಫಾಮೋಲಿನ್ ಉತ್ತಮ್, ಸಫಲ್ ದೀಪದ ಎಣ್ಣೆ, ಸಫಲ್ ಕಡಲೆ ಕಾಯಿ ಬೀಜ, ತೊಗರಿ ಬೇಳೆ ಹರಳು ಉಪ್ಪು, ಮತ್ತು ಪುಡಿ ಉಪ್ಪು, ಉದ್ದಿನ ಬೇಳೆ, ಬನ್ಸಿ ರವೆ ಮತ್ತು ಇಡ್ಲಿ ರವೆ, ಕೆಂಪು ಮೆಣಸಿನ ಕಾಯಿ ಪುಡಿ, ಸಕ್ಕರೆ, ಸ್ಟೀಮ್ ಅಂಡ್ ರಾ ರೈಸ್, ಸಫಲ್ ಚಹಾ ಮತು ಕಾಫಿ ಪುಡಿ, ಸಫಲ್ ಗೋಧಿ ಹಿಟ್ಟು, ಅಕ್ಕಿ ಹಿಟ್ಟು, ಸಫಲ್ ಬ್ರಾಂಡಿನ ಸಿರಿ ಧಾನ್ಯಗಳು ಆಗಿರುತ್ತವೆ.<br><br>**ಧ್ಯೇಯೋದ್ದೇಶಗಳು:**<br><br>ರೈತರಿಗೆ ಬಿತ್ತನೆ ಬೀಜಗಳನ್ನು RSK ಮುಂಖಾಂತರ ವಿತರಣೆ ಮಾಡುತ್ತದೆ ಹಾಗೂ ರೈತರಿಂದ ಎಣ್ಣೆಕಾಳುಗಳನ್ನು ಹಾಗೂ ಇತರೆ ಪದಾರ್ಥಗಳನ್ನು ಬೆಂಬಲ ಬೆಲೆ ಯೋಜನೆಯಡಿ ಸಂಸ್ಕರಿಸಿ, ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮಗಳಿಗೆ ಹಾಗೂ ಗ್ರಾಹಕರಿಗೆ ವಿತರಿಸಲು ಉದ್ದೇಶ ಹೊಂದಿರುತ್ತದೆ. |
| ಆ) | ಈ ಉತ್ಕೃಷ್ಟ ಉತ್ಪನ್ನಗಳಿಗೆ ಸರ್ಕಾರ ಪ್ರೋತ್ಸಾಹ ನೀಡಲು ಕೈಗೊಂಡಿರುವ ಕ್ರಮಗಳೇನು: | ಸರ್ಕಾರದ ವತಿಯಿಂದ ಈಗಾಗಲೇ ಪಾಮ್ ಆಯಿಲ್ ಗೆ 2004 ರಲ್ಲಿ 4 ಜಿ ವಿನಾಯಿತಿ ನೀಡಿದ್ದು, ಇನ್ನುಳಿದ ಪದಾರ್ಥಗಳಿಗೆ 4 ಜಿ ವಿನಾಯಿತಿ ನೀಡಲು, ಸಹಕಾರ ಸಂಘಗಳ ನಿಬಂಧಕರ ಕಛೇರಿಯಿಂದ ದಿನಾಂಕ:10/12/2024 ರಂದು ಸರ್ಕಾರಕ್ಕೆ ಪ್ರಸ್ತಾವನೆ ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ. |
| ಇ) | ಈ ಸಂಸ್ಥೆ ಉತ್ಪಾದಿಸುವ ಉತ್ಪನ್ನಗಳನ್ನು ಸರ್ಕಾರ ಖರೀದಿ ಮಾಡಲು 4 ಜಿ ವಿನಾಯಿತಿ ನೀಡಲು ಸರ್ಕಾರ ಮುಂದಾಗುವುದೇ? | |

**ಸಂಖ್ಯೆ: ಸಿಒ 46 ಪಿಎಂಸಿ 2025**

K. N. Rajanna

**(ಕೆ.ಎನ್.ರಾಜಣ್ಣ)**

ಸಹಕಾರ ಸಚಿವರು